GS

# SSLC MATHS LIVE TARGET : 40

12

## ಸಂಖ್ಯಾಶಾಸ್ತ್ರ

ವಿದ್ಯಾರ್ಥಿಯ ಹೆಸರು :                ದಿನಾಂಕ :

---

1) $20-40, 40-60, 60-80$ ಈ ವರ್ಗಾಂತರಗಳ ಗಾತ್ರವು

A) 10    B) 20

C) 30    D) 40

2) ಕೆಲವು ದತ್ತಾಂಶಗಳ ಸರಾಸರಿ ಮತ್ತು ಮಧ್ಯಾಂಕ ಕ್ರಮವಾಗಿ 20 ಮತ್ತು 22 ಆದರೆ ಬಹುಲಕವು

A) 20    B) 26

C) 22    D) 21

3) ಒಂದು ವಿತರಣೆಯ ಅಧಿಕವಿರುವ ಮತ್ತು ಕಡಿಮೆ ಇರುವ ಓಜೀವ್‌ಗಳು $(15, 20)$ ಬಿಂದುವಿನಲ್ಲಿ ಸಂಧಿಸಿದಾಗ ಮಧ್ಯಾಂಕವು

A) 10    B) 20

C) 15    D) 35

4) $30-45$ ಈ ವರ್ಗಾಂತರದ ಮಧ್ಯಬಿಂದು

A) 37.5    B) 27.5

C) 40    D) 35



LIVEWORKSHEETS

5) ಈ ಕೆಳಗಿನವುಗಳಲ್ಲಿ ಯಾವುವು ಕೇಂದ್ರೀಯ ಪ್ರವೃತ್ತಿ ಅಳತೆಗಳಾಗಿವೆ?

A) ಸರಾಸರಿ , ಬಹುಲಕ, ಮಾನಕ ವಿಚಲನೆ

B) ವ್ಯಾಪ್ತಿ , ಮಧ್ಯಾಂಕ, ಬಹುಲಕ

C) ವ್ಯಾಪ್ತಿ, ಸರಾಸರಿ,ಬಹುಲಕ

D) ಸರಾಸರಿ,ಬಹುಲಕ,ಮಧ್ಯಾಂಕ

6) ಈ ಕೆಳಗೆ ಕೊಟ್ಟಿರುವ ಆವೃತ್ತಿ ವಿತರಣಾ ಕೋಷ್ಟಕದಲ್ಲಿ ರೂ 20,000 ದಿಂದ ರೂ 25,000 ದ ವರೆಗೆ ಆದಾಯವ್ಯಾಪ್ತಿ ಹೊಂದಿರುವ ಕುಟುಂಬಗಳ ಸಂಖ್ಯೆ

| ಮಾಸಿಕ ಆದಾಯ | ಮಾಸಿಕ ಆದಾಯ |
|---|---|
| ರೂ 5000 ಕ್ಕಿಂತ ಅಧಿಕ | 100 |
| ರೂ 10000 ಕ್ಕಿಂತ ಅಧಿಕ | 85 |
| ರೂ 15000 ಕ್ಕಿಂತ ಅಧಿಕ | 69 |
| ರೂ 20000ಕ್ಕಿಂತ ಅಧಿಕ | 50 |
| ರೂ 25000 ಕ್ಕಿಂತ ಅಧಿಕ | 37 |
| ರೂ 30000 ಕ್ಕಿಂತ ಅಧಿಕ | 15 |

A) 35 B) 22

C) 13 D) 19

7) ಒಬ್ಬ ವಿದ್ಯಾರ್ಥಿಯು ಕಿರುಪರೀಕ್ಷೆಯ 6 ವಿಷಯಗಳಲ್ಲಿ ಪಡೆದ ಸರಾಸರಿಗಳು 18, ಅವನು 5 ವಿಷಯದಲ್ಲಿ ತೆಗೆದ ಅಂಕಗಳ ಮೊತ್ತ 86 ಆದರೆ 6 ನೇ ವಿಷಯದಲ್ಲಿ ಅವನು ಪಡೆದ ಅಂಕಗಳು

A) 20 B) 21

C) 18 D) 22



LIVEWORKSHEETS

8) ಒಂದು ವರ್ಗೀಕೃತ ದತ್ತಾಂಶಗಳ ಮಧ್ಯಾಂಕ ಮತ್ತು ಬಹುಲಕಗಳು ಕ್ರಮವಾಗಿ 26 ಮತ್ತು 29 ಆದರೆ ಈ ದತ್ತಾಂಶಗಳ ಸರಾಸರಿಯು

A) 27.5 B) 28.4

C) 25.8 D) 24.5

9) ಒಬ್ಬ ವಿದ್ಯಾರ್ಥಿಯು ಪ್ರಥಮ ಭಾಷೆಯಲ್ಲಿ 65 ಅಂಕಗಳನ್ನು , ವಿಜ್ಞಾನ ವಿಷಯದಲ್ಲಿ 50 ಅಂಕಗಳನ್ನು, ಸಮಾಜ ವಿಜ್ಞಾನದಲ್ಲಿ 55 ಅಂಕಗಳನ್ನು ಹಾಗೂ ಗಣಿತದ ವಿಷಯದಲ್ಲಿ ಕೆಲವು ಅಂಕಗಳನ್ನು ಪಡೆದಿರುತ್ತಾನೆ. ನಾಲ್ಕು ವಿಷಯಗಳಲ್ಲಿ ಪಡೆದಿರುವ ಸರಾಸರಿ ಅಂಕಗಳು 60 ಆದರೆ ಗಣಿತ ವಿಷಯದಲ್ಲಿ ಅವನು ಪಡೆದಿರುವ ಅಂಕಗಳು :

A) 65 B) 60

C) 50 D) 70

10) ಕೇಂದ್ರೀಯ ಪ್ರವೃತ್ತಿಯ ಮೂರು ಅಳತೆಗಳಿಗಿರುವ ಪ್ರಾಯೋಗಿಕ ಸಂಬಂಧವು

A) 3 ಮಧ್ಯಾಂಕ = ಬಹುಲಕ + 2 ಸರಾಸರಿ

B) 2 ಸರಾಸರಿ = ಬಹುಲಕ + 3 ಮಧ್ಯಾಂಕ

C) 2 ಮಧ್ಯಾಂಕ = 2 ಬಹುಲಕ + 3 ಸರಾಸರಿ

D) ಬಹುಲಕ = 3 ಸರಾಸರಿ – ಮಧ್ಯಾಂಕ



LIVEWORKSHEETS